

## ಪ್ರಯೋಜನ ಹಲವು

ಒನ್ ಮಿನಿಟ್ ಸೀರೆಯಿಂದ ಹಲವು ಪ್ರಯೋಜನಗಳಿವೆ. ಕೆಲವು ಟಿಪ್ಸ್‌ಗಳನ್ನು ಪಾಲಿಸಿದರೆ ಸೀರೆಪ್ರಿಯರು ನಿತ್ಯವೂ ವೈವಿಧ್ಯಮಯವಾಗಿ ಮಿಂಚಬಹುದು.

### ಸಮಯದ ಉಳಿತಾಯ

ಮಾಮೂಲಿಯಾಗಿ ಸೀರೆ ಉಡುವಾಗ ನೆರಿಗೆಗಳು ನಿಖರವಾಗಿ ಇರಬೇಕಾಗುತ್ತದೆ. ಆದರೆ ರೆಡಿ ಟು ವೇರ್ ಸೀರೆಯಲ್ಲಿ ಎಲ್ಲವೂ ನೀಟಾಗಿ ಇರುವುದರಿಂದ ನೆರಿಗೆ, ಪಿನ್ ಹಾಕುವ ಕೆಲಸ ಇಲ್ಲದೆ ಬೇಗನೆ ಉಟ್ಟುಕೊಳ್ಳಬಹುದು. ಇದರಿಂದ ಸಮಯದ ಉಳಿತಾಯವಾಗುತ್ತದೆ.

### ಧರಿಸುವುದು ಸುಲಭ

ರೆಡಿ ಟು ವೇರ್ ಸೀರೆ ಧರಿಸುವುದು ಬಹಳ ಸುಲಭ. ಮೊದಲು ಸೀರೆ ಹಿಡಿದುಕೊಳ್ಳಿ, ಬಳಿಕ ಅದನ್ನು ಸೊಂಟದ ಸುತ್ತಲೂ ಸುತ್ತಿಕೊಳ್ಳಿ, ನಂತರ ಒದಗಿಸಿದ ಥ್ರೆಡ್‌ನೊಂದಿಗೆ ಒಳಪದರಗಳನ್ನು ಹಿಡಿಯಿರಿ. ಮುಂದೆ, ನೆರಿಗೆಯ ಪದರವನ್ನು ತಂದು ನಿಮ್ಮ ಸೊಂಟದ ಮೇಲೆ ಹೆಚ್ಚು ಆರಾಮದಾಯಕವಾದ ಕೊಕ್ಕೆಯಲ್ಲಿ ಅದನ್ನು ಸುರಕ್ಷಿತಗೊಳಿಸಿ. ಕೊನೆಗೆ ನೆರಿಗೆಯ ಪಲ್ಲುವನ್ನು ನಿಮ್ಮ ಭುಜದ ಮೇಲೆ ಕಟ್ಟಿಕೊಳ್ಳಿ ಮತ್ತು ಅದನ್ನು ನಿಮ್ಮ ಬ್ಲೌಸ್‌ಗೆ ಪಿನ್ ಮಾಡಿ.

### ಪರಿಪೂರ್ಣವಾಗಿರಬಹುದು

ಒನ್ ಮಿನಿಟ್ ಸೀರೆಯಿಂದ ಲುಕ್ ಪರಿಪೂರ್ಣವಾಗಿರುತ್ತದೆ. ಸೀರೆ ಜಾರುವುದು, ಬೀಳುವುದು ಮುಂತಾದ ಸಮಸ್ಯೆಗಳೇ ಇಲ್ಲ.

ಗಮನಸೆಳೆದಿದ್ದಾರೆ. ಅದುವೇ ‘ಒನ್ ಮಿನಿಟ್ ಸಾರಿ’ ವಿನ್ಯಾಸ ಅಥವಾ ‘ರೆಡಿ ಟು ವೇರ್ ಸೀರೆ’.

ಸೀರೆ ಉಡುವುದೆಂದರೆ ಅದು ಸುಲಭದ ಕೆಲಸವೇ? ಮೊದಮೊದಲು ಸೀರೆಯ ಮೊರೆ ಹೋದೆವೆಂದರೆ ಉಡಲು ಅದು ಹರಸಾಹಸವೇ. ಸೀರೆಗೆ ಹೊಂದಾಣಿಕೆಯಾಗುವ ರವಿಕೆ ಹುಡುಕಬೇಕು, ಇವುಗಳ ಜೊತೆಗೆ ಯಾವ ತರಹದ ಸೀರೆ ಉಡಬೇಕು ಹಾಗೂ ಹೇಗೆ ಉಡಬೇಕು ಎಂಬ ಚಿಂತೆ ಬೇರೆ. ಸೀರೆ ಉಟ್ಟ ಮೇಲೆ ನೆರಿಗೆ ಸರಿ ಮಾಡುವ ಆತುರ, ಸೇಫ್ಟಿ ಪಿನ್ ಹುಡುಕುವ ಕೆಲಸ, ಕಂಚಿ ಹಾಗೂ ಧರ್ಮಾವರಂ ಸೀರೆ ಉಡಲು ತುಂಬಾ ಭಾರ, ಕಾಟನ್ ಸೀರೆ ಉಟ್ಟಾಗ ಸ್ಟಿಫ್ ಆಗಿ ನಿಲ್ಲದೇ ಇರುವುದು, ಜಾರ್ಜೆಟ್ ಸೀರೆ ಗಟ್ಟಿಯಾಗಿ ನಿಲ್ಲುವುದೇ ಇಲ್ಲ, ಶಿಫಾನ್ ಸೀರೆ ಜೋತುಬೀಳುತ್ತದೆ, ಸಾಫ್ಟ್ ಸಿಲ್ಕ್ ಸೀರೆ ಉಟ್ಟರೆ ಜಾರುತ್ತದೆ, ನಾಳೆ ಉಡಬೇಕೆಂದರೆ ಇವತ್ತೇ ಬಹಳ ಹೊತ್ತು ವ್ಯಯ ಮಾಡಿ ನೆರಿಗೆಗಳನ್ನು ನೀಟಾಗಿ ಮಡಿಕೆ ಮಾಡಿ ಹಾಳಾಗದಂತೆ ಹ್ಯಾಂಗರ್‌ಗೆ ನೇತು ಹಾಕುವ ಕೆಲಸ ಬೇರೆ.

ಇಷ್ಟೆಲ್ಲ ಕಾರಣಗಳ ನಡುವೆ ‘ನಂಗೆ ಸೀರೆ ಉಡಲು ಬರುವುದೇ ಇಲ್ಲ’ ಎಂಬ ನೆವ ಮಾಡಿಕೊಂಡು ಸೀರೆ ಉಡುವುದೇ ಬೇಡ ಎಂಬ ನಿರ್ಧಾರಕ್ಕೆ ಬಂದಿರುವ ಯುವತಿಯರು ಇದೀಗ ‘ಒನ್ ಮಿನಿಟ್ ಸೀರೆ’ಗೆ ಫಿದಾ ಆಗಿ ಬಿಟ್ಟಿದ್ದಾರೆ. ಹಬ್ಬ ಹರಿದಿನಗಳಲ್ಲಿ ಸೀರೆ ಉಡಬೇಕು ಎಂಬ ಮಹಿಳೆಯರ ಮನದಾಸೆ ಇಂಥ ರೆಡಿ ಸೀರೆಗಳಿಂದ ಈಡೇರಿದಂತಾಗಿದೆ. ನಮಗಿಷ್ಟವಾದ ಸೀರೆ ತೆಗೆದುಕೊಂಡು ರಾಪ್ ಅರೌಂಡ್ ಥರ ಸುತ್ತಿಕೊಂಡು, ಹುಕ್ ಹಾಕಿಕೊಂಡರೆ ಸಾಕು. ಸಖತ್ತಾಗಿ ಕಾಣುವ ಟ್ರೆಡಿಷನಲ್ ಲುಕ್ ನೀಡುವ ಸೀರೆ ಉಟ್ಟ ಹಾಗೆಯೇ. ಕೆಲವೊಂದು ಸೀರೆಗಳಿಗೆ ಇಲಾಸ್ಟಿಕ್ ಮತ್ತು ಹುಕ್ ಎರಡನ್ನೂ ಸೇರಿಸಿರುತ್ತಾರೆ. ಸೆರಗು ಹೊದ್ದು ಭುಜದ ಬಳಿ ಹುಕ್ ಹಾಕಿದರೆ ಸಾಕು ನೀಟಾಗಿ ಕಾಣುವ ಸೀರೆ ರೆಡಿ. ಈ ಸೀರೆಗಳ ಜೊತೆಗೆ ರೆಡಿ ಮೇಡ್ ಡಿಸೈನರ್ ಬ್ಲೌಸ್ ಕೂಡ ಮಾರುಕಟ್ಟೆಯಲ್ಲಿ ದೊರೆಯುತ್ತದೆ.

ಕೆಲವು ಸೀರೆಗಳಿಗೆ ಅಟ್ಯಾಚ್ಡ್ ಬ್ಲೌಸ್ ಕೂಡ ಉಂಟು. ಹಲವು ವಿಧದಲ್ಲಿ ಸಿಗುವ ಈ ಸೀರೆಗಳನ್ನು ಮೊದ ಮೊದಲು ಕೇವಲ ಸ್ಪನ್, ಜಾರ್ಜೆಟ್ ಹಾಗೂ ಶಿಫಾನ್‌ಗಳಲ್ಲಿ ಸಿದ್ಧಪಡಿಸುತ್ತಿದ್ದರು. ಈ ಬಟ್ಟೆಗಳು ಸಾಕಷ್ಟು ತೆಳು ಇರುವ ಕಾರಣ ಇದೀಗ ಈ ತರಹದ ಸೀರೆಗಳಿಗೆ ಲೈನಿಂಗ್ ಅಳವಡಿಸುತ್ತಿದ್ದಾರೆ. ರೇಷ್ಮೆ ಸೀರೆಗಳಲ್ಲಿಯೂ ಒನ್ ಮಿನಿಟ್ ಸೀರೆಗಳು ಲಭ್ಯ. ರೇಷ್ಮೆ ಸೀರೆಗಳು ದಪ್ಪ ಇರುವುದರಿಂದ ಇವಕ್ಕೆ ಲೈನಿಂಗ್ ಅವಶ್ಯಕತೆಯಿಲ್ಲ.

ನೀವು ಹೋಗುವ ಸಮಾರಂಭಗಳಿಗೆ ಅನುಗುಣವಾಗಿ ಈ ತರಹದ ವಿನ್ಯಾಸದ ಸೀರೆ ಬೇಕಾದರೂ ಮಾರುಕಟ್ಟೆಯಲ್ಲಿ ಖರೀದಿಸಬಹುದು. ಇದೀಗ ಆನ್‌ಲೈನ್ ಶಾಪಿಂಗ್ ಕೂಡ ತುಂಬಾ ಪ್ರಚಲಿತವಾಗಿರುವ ಕಾರಣ ಮನೆಯಲ್ಲಿಯೇ ಕುಳಿತು ನಿಮಗಿಷ್ಟವಾದ ‘ಒನ್ ಮಿನಿಟ್ ಸೀರೆ’ ಆರ್ಡರ್ ಮಾಡಬಹುದು.

### ಪ್ಲೀಟೆಡ್ ಸೀರೆ

ಪ್ಲೀಟೆಡ್ ಸೀರೆಗಳು ಫ್ಯಾಷನ್ ಜಗತ್ತಿನಲ್ಲಿ ಸಖತ್ ಸದ್ದು ಮಾಡುತ್ತಿವೆ. ವಿಶೇಷ ತಂತ್ರಜ್ಞಾನ ಬಳಸಿ ಮಾಡುವ ಪ್ಲೀಟೆಡ್ ಸೀರೆಗಳನ್ನು ರೇಷ್ಮೆ, ಸ್ಯಾಟಿನ್, ಕ್ರೇಪ್, ಸಾಫ್ಟ್ ಸಿಲ್ಕ್, ಜಾರ್ಜೆಟ್ ಮೆಟೀರಿಯಲ್‌ಗಳಲ್ಲಿ ತಯಾರಿಸಬಹುದು. ಪ್ಲೀಟೆಡ್ ಸೀರೆಗಳು ದಪ್ಪಗಿರುವ, ತೆಳ್ಳಗಿರುವ ಮಹಿಳೆಯರಿಗೂ ಚೆನ್ನಾಗಿ ಕಾಣಿಸುತ್ತದೆ.

ಪ್ಲೀಟೆಡ್ ಸೀರೆಗೆ ಫಾಲ್ಸ್, ಅಂಚು ಹೊಲಿಸುವ ಅವಶ್ಯಕತೆಯೇ ಇಲ್ಲ. ಸುಲಭವಾಗಿ ಉಡಲು ಬರುತ್ತವೆ. ಪಾರ್ಟಿ, ಮದುವೆ, ಕಚೇರಿ... ಹೀಗೆ ಎಲ್ಲ ಸಂದರ್ಭಕ್ಕೆ ಹೊಂದುವಂತೆ ಸೆರಗನ್ನು, ಸಿಂಗಲ್ ಲೇಯರ್, ಮಲ್ಟಿ ಲೇಯರ್, ವಿನ್ಯಾಸಗಳಲ್ಲಿ ಧರಿಸಿಕೊಳ್ಳಬಹುದು. ಹಗುರವಾಗಿರುವ ಈ ಸೀರೆಗಳು ಉಟ್ಟರೆ ಸಖತ್ ಲುಕ್ ಕೊಡುತ್ತದೆ.

ಹಬ್ಬ, ಶುಭ ಸಮಾರಂಭ ಮುಂತಾದ ಸಂದರ್ಭಗಳಲ್ಲಿ ಮಹಿಳೆಯರು ಸಾಂಪ್ರದಾಯಿಕ ಉಡುಗೆಗೇ ಆದ್ಯತೆ ನೀಡುತ್ತಾರೆ. ಇಂತಹ ಕಾರ್ಯಕ್ರಮಗಳಲ್ಲಿ ಸೀರೆ ಉಡಲು ಸಮಯ ಬೇಕು. ಬಹುತೇಕರಿಗೆ ಮನೆ ಕೆಲಸ ಎಲ್ಲವನ್ನೂ ಮಾಡಿ ಮುಗಿಸಿ ಸೀರೆಯನ್ನು ಅಂದವಾಗಿ ಉಡುವಷ್ಟು ಸಮಯವೂ ಸಾಕಾಗುವುದಿಲ್ಲ. ಅದಕ್ಕಾಗಿ ಒಂದು ದಿನ ಮುಂಚೆಯೇ ಸೀರೆಯ ಸೆರಗನ್ನು ಹೊಂದಿಸಿ, ಅದಕ್ಕೆ ಚಂದವಾಗಿ ಇಸ್ತ್ರಿ ಹಾಕಿ, ಪಿನ್ ಮಾಡಿಟ್ಟುಕೊಳ್ಳುತ್ತಾರೆ. ಹೀಗೆ ಸೀರೆಯನ್ನು ಮೊದಲೇ ರೆಡಿ ಮಾಡಿಟ್ಟರೆ ಸಮಯದ ಉಳಿತಾಯವೂ ಆಗುತ್ತದೆ. ಈ ಸಮಯದಲ್ಲಿ ಪ್ಲೀಟೆಡ್ ಸೀರೆಗಳು ಸಹಾಯಕ್ಕೆ ಬರುತ್ತದೆ. ದೂರದೂರಿಗೆ ಪ್ರಯಾಣ ಮಾಡುತ್ತಿದ್ದರೆ ಹೀಗೆ ಪ್ಯಾಕ್ ಮಾಡಿದ ಸೀರೆಗಳನ್ನು ಕೊಂಡೊಯ್ಯುವುದು ಸುಲಭ. ಪ್ರಿ ಪ್ಲೀಟೆಡ್ ಆಗಿರುವ ಕಾರಣ ಸುಲಭವಾಗಿ ಉಟ್ಟುಕೊಂಡು ಸಂಭ್ರಮಿಸಬಹುದು.